**ದಿನಾಂಕಃ 07.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟಿ ಸವಾಲುಃ ಶ್ರೀ ಎನ್.ಟಿ.ಎಸ್., ವಾದಿ ಪರ ವಕೀಲರಿಂದ**

ಸರೋಜಮ್ಮ ಚೋಳಗುಡ್ಡ ಹಾಗೂ ದೊಡ್ಡೇರಿ ಗ್ರಾಮದಲ್ಲಿ ವಾಸವಾಗಿದ್ದರು ಎಂಬುದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಬೋಮ್ಮಯ್ಯ ರವರಿಗೆ ಪಾರ್ಶ್ವವಾಯು ಆಗಿದ್ದಾಗ ಚಳ್ಳಕೆರೆ ಆಸ್ಪತ್ರೆ ಯಲಿಲ ಚಿಕಿತ್ಸೆ ಕೊಡಿಸಿರುತ್ತೇವೆ. ಸದರಿ ವಿಚಾರಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ 211/2015 ದಾವೆಯನ್ನು ಸಲ್ಲಿಸಿ ದಾವಾ ಷೆಡ್ಯೂಲ್ ಸ್ವತ್ತನ್ನು ಪೋಡುಗಳಾಗಿ ವಿಭಾಗಿಸಿಕೊಂಡಿರುತ್ತೇವೆ ಎಂದರೆ ಸರಿ. ಬೊಮ್ಮಯ್ಯ ರವರಿಗೆ ಬುದ್ದಿ ಸ್ತಿಮಿತದಲ್ಲಿತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ



ಹಾಜರು ಪಡಿಸಿರುವುದಿಲ್ಲ. ಬೊಮ್ಮಯ್ಯ ರವರು 04.12.2013 ರಲ್ಲಿ ಆರೋಗ್ಯ ವಾಗಿದ್ದ ವಿಚಾರ ನನಗೆ ಖುದ್ದು ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಚಳ್ಳಕೆರೆ ನಗರಕ್ಕೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿಗೆ ಕೊಡಬಾರದು ಎಂಬ ಉದ್ದೇಶದಿಂದ ಎಲ್ಲಾ ಅಂಶಗಳನ್ನು ಸೃಷ್ಟಿಸಿಕೊಂಡು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರೆಲ್ಲರೂ ಸೇರಿ ತಕರಾರು ಸಲ್ಲಿಸಿತ್ತೇವೆ. ತಕರಾರನ್ನು ಸಲ್ಲಿಸಲು ಎಲ್ಲರೂ ಸೇರಿ ಮಾಹಿತಿ ನೀಡಿರುತ್ತೇವೆ. ಬೊಮ್ಮಯ್ಯ ರವರಿಗೆ ಆರೋಗ್ಯ ಸರಿ ಇರದ ಕಾರಣ ಎಲ್ಲಾ ಪ್ರತಿವಾದಿಯವರು ಬೊಮ್ಮಯ್ಯ ರವರನ್ನು ನೋಡಿಕೊಳ್ಳುತ್ತಿದ್ದೆವು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ಮರಣ ಪ್ರಮಾಣ ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ವಿಲ್ ಬರೆದಿರುವುದಿಲ್ಲ ಎಂದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.